ವಿಷಯ :- ರಾಜ್ಯದಲ್ಲಿ ಕಪ್ಪು ಮತ್ತು ಬೂದು ಪ್ರದೇಶ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 833 (1267)

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :- ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನಿಗಳ ಶಿಫಾರಸ್ಸಿನನ್ವಯ ಯಾವ ಯಾವ ತಾಲ್ಲೂಕುಗಳನ್ನು ಕಪ್ಪು ಪ್ರದೇಶ ಮತ್ತು ಬೂದು ಪ್ರದೇಶವೆಂದು ಘೋಷಿಸ ಲಾಗಿದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಬಂಟವಾಳ ತಾಲ್ಲೂಕುಗಳನ್ನು ಕಪ್ಪು ಪ್ರದೇಶ ಮತ್ತು ಬೆಳ್ತಂಗಡಿ ತಾಲ್ಲೂಕನ್ನು ಬೂದು ಪ್ರದೇಶವೆಂದು ಘೋಷಿಸಿ ರುವುದು ನಿಜವೇ?

ಇ) ಇದರಿಂದ ರೈತರಿಗೆ ಕೆರೆ ಬಾವಿಗಳನ್ನು ತೋಡಲು ಬ್ಯಾಂಕುಗಳು, ಸಹಕಾರಿ ಸಂಘಗಳು ಸಾಲ ಕೊಡಲು ನಿರಾಕರಿಸುತ್ತಿರುವುದು ನಿಜವೇ ;

ಈ) ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ? ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಡಿ., ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :-

ಅ) ಕಪ್ಪು ಮತ್ತು ಬೂದು ಪ್ರದೇಶವೆಂದು ಘೋಷಿಸಿರುವ ತಾಲ್ಲೂಕುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಹೌದು.

ಇ) ಹೌದು.

ಈ) ಸಾಲ ನಿಲ್ಲಿಸಿರುವುದರಿಂದ ಹೊಸದಾಗಿ ಬಾವಿಗಳನ್ನು ನಿರ್ಮಾಣ ಮಾಡ ಬೇಕೆಂದಿರುವ ರೈತರಿಗೆ ತೊಂದರೆಯಾಗುವುದು ನಿಜ. ಆದರೆ, ಇದರಿಂದ ಈಗಾಗಲೇ ಕೃಷಿ ಉದ್ದೇಶಕ್ಕಾಗಿ, ಚಾಲ್ತಿಯಲ್ಲಿರುವ ಬಾವಿಗಳನ್ನೇ ನಂಬಿರುವ ರೈತರಿಗೆ ಹಾಗೂ ಕುಡಿಯುವ ನೀರನ್ನು ಉಪಯೋಗಿಸುವ ಜನರಿಗೆ ಅನುಕೂಲವಾಗಿರುವುದು. ಅದಾಗ್ಯೂ ಇದನ್ನು ಸರಿಪಡಿಸಲು ಜಿಲ್ಲಾ ಭೂವಿಜ್ಞಾನಿಯವರಿಗೆ ಮೇಲ್ಕಂಡ ತಾಲ್ಲೂಕುಗಳಲ್ಲಿ ಮರು ಸಮೀಕ್ಷೆ ನಡೆಸಿ ವರದಿಯನ್ನು ನೀಡುವಂತೆ ತಿಳಿಸಲಾಗಿದೆ.

LIST OF DARK AND GRAY TALUK IN THE STATE OF KARNATAKA

(As per the Groundwater assesment carried out by the Department of Mines & Geology

(Position os on Dec.1994)

Sl. No.	District	Name and category of Taluks	
		Dark	Grey
1.	Bangalore	1. Anekal	1. Doddaballapur
		2. Bangalore North	2. Ramnagar
		3. Bangalore South	
		4. Channapattana	
		5. Devanahalli	
		6. Hoskote	
2.	Belgaum	1. Chikkodi	1. Athani
		2. Hukkeri	2. Bailhongal
3.	Bellary	NIL	1. H.B. Hally
4.	Bidar	NIL	1. Bidar
5.	Bijapur	1. Indi	1. Bagewadi
			2. Bijapur
6.	Chitradurga	NIL	1. Challakere
			2. Chitradurga
7.	D. Kannada	1. Bantwal	1. Belthangadi
		2. Sulya	
8.	Hassan	1. Channarayapaṭna	1. Arasikere

9.	Kolar	1. Chickballapur	2. Chintamani
		2. Kolar	2. Gowribidanur
		3. Malur	3. Mulbagal
			4. Sidlaghatta
			5. Srinivasapura
10.	Mysore	1. Kollegal	1. Chamrajanagar
11.	Raichur	NIL	1. Kustagi
12.	Tumkur	1. Gubbi	1. Koratagere
		2. Madhugiri	2. Kunigal
		3. Tiptur	3. Sira
		4. Tumkur	
		5. Turuvekere	

ವಿಷಯ :- ಮೈಸೂರು ನಗರದ ಮಕ್ಕಾಜಿ ಚಾಕ ವಾಣಿಜ್ಯ ಸಂಪರ್ಕ ಕಟ್ಟಲು ಮಳಿಗೆಗಳ ಸ್ವಾಧೀನ.

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 834 (1487)

ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಮಕ್ಕಾಜಿ ಚೌಕ ವಾಣಿಜ್ಯ ಸಂಕೀರ್ಣವನ್ನು ಕಟ್ಟಲು 12 ಮಳಿಗೆಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಪರಿಹಾರ ರೂಪದಲ್ಲಿ ಎಷ್ಟು ಹಣ ಕೊಡಲಾಗಿದೆ, ಯಾರು ಯಾರಿಗೆ ಪರಿಹಾರ ನೀಡಲಾಗಿದೆ?

ಆ) ಈ ಮಳಿಗೆಗಳ ಹಕ್ಕುದಾರರನ್ನು ಯಾವ ದಾಖಲೆಗಳ ಆಧಾರದ ಮೇಲೆ ಗುರುತಿಸಿ ಪರಿಹಾರ ನೀಡಲಾಗಿದೆ?

ಇ) ಪರಿಹಾರ ಪಾವತಿ ಮಾಡಿರುವ ಈ ಆಸ್ತಿಯನ್ನು ಸ್ವಾಧೀನ ಪಡಿಸಿ ಕೊಳ್ಳಲಾಗಿದಯೇ ಈಗ ಯಾರ ಸ್ವಾಧೀನದಲ್ಲಿದೆ.

ಈ) ಈ ಸಂಕೀರ್ಣದ ನಿರ್ಮಾಣ ಯಾವ ಹಂತದಲ್ಲಿದೆ?